## ಬುತ್ತಿ ಚಿಗುರು

### ಕುಜ ದೋಷ



ನಾನು ಆ ದಿನ ದೇವಸ್ಥಾನಕ್ಕೆ ಹೋಗಿ ದೇವರಿಗೆ ಕೈ ಮುಗಿದು, ಪ್ರದಕ್ಷಿಣೆ ಹಾಕಿ ನಂತರ ಹಾಗೇ ಸುಮ್ಮನೇ ಕುಳಿತಿದ್ದೆ. ಭಕ್ತರು ಸಹ ಹೆಚ್ಚು ಇರಲಿಲ್ಲ. ಆಗ ನನ್ನ ಪರಿಚಯದ, ಪಕ್ಕದ ವಠಾರದ ಮಹಿಳೆಯೊಬ್ಬರು ದೇವಸ್ಥಾನದ ಒಳಗೆ ಬಂದವರೇ ಸೀದಾ ಪುರೋಹಿತರನ್ನು ಪ್ರಶ್ನೆ ಮಾಡುತ್ತಿದ್ದರು.

'ಏನು ಪುರೋಹಿತರೇ, ನನ್ನ ಗಂಡ ಈ ಪಾಟಿ ಕುಡಿದು ಸದಾ ಜಗಳ ಆಡುತ್ತಿರುತ್ತಾರೆ. ನೀವು ಜಾತಕ ಸರಿಯಾಗಿ ನೋಡಿರಲಿಲ್ಲವಾ?' ಎಂದಾಗ ಪುರೋಹಿತರು ಶಾಂತವಾಗಿ 'ಜಾತಕ ನೋಡಿ ಅವರಿಗೆ 'ಕುಜ' ದೋಷ ಇದೆ ಅಂದಿದ್ದೆ ಅಲ್ಲವಾ' ಎಂದರು. ಕೂಡಲೇ ಆ ಮಹಿಳೆ 'ಕುಜ' ದೋಷ ಅಂದರೇನು ಎಂದು ಪ್ರಶ್ನಿಸಿದ್ದಕ್ಕೆ ಪುರೋಹಿತರು, 'ಅದೇ ತಾಯಿ, ಕುಡಿದು ಜಗಳವಾಡುವ ದೋಷ ಅಂತ. ಸಣ್ಣದಾಗಿ 'ಕುಜ' ದೋಷ ಅನ್ನುತ್ತೇವೆ. ಅದಕ್ಕೆಲ್ಲಾ ಪರಿಹಾರ ನಿಮ್ಮ ಕೈಯಲ್ಲೇ ಇದೆ ಎನ್ನಬೇಕೆ? ಅವರಿಬ್ಬರ ಸಂಭಾಷಣೆ ಕೇಳಿದ ನನಗೆ ಸುಸ್ತು!

**ಜಯಮಾಲಾ ಪೈ**

---

### ವನವಾಸಕ್ಕೆಂದು ಕಾಡಿಗೆ ಹೋದನು



ಕಲೆ: ಗಣೇಶ ಆಚಾರ್ಯ

ಸಮಾಜ ವಿಜ್ಞಾನದ ಮೇಷ್ಟ್ರು ರಮೇಶ್, ವಿದ್ಯಾರ್ಥಿಗಳಿಗೆ ಬೋಧಿಸುವಾಗ, 'ಪ್ರಶ್ನೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಅರ್ಧ ಉತ್ತರ ಅದರಲ್ಲೇ ಇರುತ್ತದೆ. ಹಾಗಾಗಿ ಪ್ರಶ್ನೆಯನ್ನು ಒಂದಲ್ಲ, ಎರಡು ಬಾರಿ ಓದಿ ಅರ್ಥೈಸಿಕೊಳ್ಳಿ' ಎಂದು ಆಗಾಗ ಹೇಳುತ್ತಿದ್ದರು.

ಎಂಟನೇ ತರಗತಿಯ ರಮ್ಯಾ ಅದನ್ನೇ ಮನನ ಮಾಡಿಕೊಂಡಿದ್ದಳು. ಅರ್ಧ ವಾರ್ಷಿಕ ಪರೀಕ್ಷೆಯಲ್ಲಿ ಕೇಳಿದ್ದ, 'ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ' ಎಂದು ನಾಲ್ಕು ಪ್ರಶ್ನೆಗಳ ಕೇಳಲಾಗಿತ್ತು. ಅದರಲ್ಲಿ ಮೊದಲನೆಯ ಪ್ರಶ್ನೆ 'ಶ್ರೀ ರಾಮಚಂದ್ರನು ಕಾಡಿಗೆ ಏಕೆ ಹೋದನು?' ಎಂಬ ಪ್ರಶ್ನೆಗೆ 'ಶ್ರೀ ರಾಮಚಂದ್ರನು ವನವಾಸಕ್ಕೆಂದು ಕಾಡಿಗೆ ಹೋದನು' ಅಂತ ರಮ್ಯಾ ಅತ್ಯಂತ ಸ್ಪುಟವಾಗಿ ಉತ್ತರ ಬರೆದಿದ್ದಳು!

**ಮಲ್ಲಿಕಾರ್ಜುನ ಎಸ್.ಬಿ.**